# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 354 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 15.09.2022 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಬಹುತೇಕ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಕಳೆದ 2 ವರ್ಷಗಳಲ್ಲಿ ಎಷ್ಟು ದೂರುಗಳು ಸ್ವೀಕೃತವಾಗಿವೆ; ಈ ದೂರುಗಳ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ವಿವರ ನೀಡುವುದು) | ಬಂದಿದೆ.<br><br>ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ:13774/2020, ದಿನಾಂಕ:01.12.2020ರಲ್ಲಿನ ಆದೇಶದಂತೆ ಸಾರ್ವಜನಿಕರಿಂದ ಇಲ್ಲವೇ ಮಹಿಳಾ ಸಂಘಟನೆಗಳಿಂದ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ದೂರುಗಳು ಸ್ವೀಕೃತವಾದಲ್ಲಿ ಯಾವುದೇ ವಿಳಂಬವಿಲ್ಲದೆ ತ್ವರಿತವಾಗಿ ಕಾನೂನಿನಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ದಿನಾಂಕ:01-12-2020 ರಿಂದ 31-03-2022 ರವರೆಗೆ ಒಟ್ಟು 7,975 ದೂರುಗಳು ಸ್ವೀಕೃತವಾಗಿದ್ದು, 7,962 ದೂರಿನ ಬಗ್ಗೆ ಕ್ರಮ ಜರುಗಿಸಿ ವಿಲೇವಾರಿ ಮಾಡಲಾಗಿರುತ್ತದೆ. ಈ ಸಂಬಂಧ ವಿವಿಧ ಕಲಂಗಳಡಿಯಲ್ಲಿ ಒಟ್ಟು 4602 ಮೊಕದ್ದಮೆಗಳನ್ನು ದಾಖಲಿಸಿ 4023 ಆರೋಪಿತರನ್ನು ದಸ್ತಗಿರಿಗೆ ಒಳಪಡಿಸಲಾಗಿರುತ್ತದೆ. 388 ವಾಹನಗಳನ್ನು ಹಾಗೂ ವಿವಿಧ ಪ್ರಕಾರದ 12797 ಲೀಟರ್ ಮದ್ಯ ಹಾಗೂ 2.5 ಕೆ.ಜಿ. ಸಿ.ಹೆಚ್. ಪೌಡರ್ ಅನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. |

| | | |
|---|---|---|
| ಆ) | ರಾಜ್ಯದಲ್ಲಿರುವ ಮದ್ಯದಂಗಡಿಗಳಿಗೆ ಅಬಕಾರಿ ಇಲಾಖೆಯು ಮಂಥ್ಲಿ ಫಿಕ್ಸ್ ಮಾಡಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ಅಕ್ರಮಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು) | ಬಂದಿದೆ.<br><br>ಆದರೆ ನಿರ್ದಿಷ್ಟವಾಗಿ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. ಮಾಸಿಕ ಸಭೆಗಳಲ್ಲಿ ಎಲ್ಲಾ ವಿಭಾಗ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿ ಸರ್ಕಾರವು ನಿಗದಿಪಡಿಸಿದ ನೀತಿ ನಿಯಮಾನುಸಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆಯೂ, ಇದನ್ನು ಉಲ್ಲಂಘಿಸುವ ಹಾಗೂ ಮಾಧ್ಯಮ ವರದಿಯ ಕುರಿತಂತೆ ದೂರುಗಳು ಸ್ವೀಕೃತವಾದಲ್ಲಿ ಸಂಬಂಧಿಸಿದ ಅಧಿಕಾರಿ/ನೌಕರರ ವಿರುದ್ದ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲು ನಿರ್ದೇಶನ ನೀಡಲಾಗಿರುತ್ತದೆ. |
| ಇ) | ಮದ್ಯದಂಗಡಿಗಳ ಮಾಲೀಕರಿಗೆ ಮದ್ಯದಂಗಡಿ ವಾರ್ಷಿಕ ನವೀಕರಣ ಸಂದರ್ಭದಲ್ಲಿ ಲಂಚಕ್ಕಾಗಿ ಇಲಾಖೆಯಿಂದ ಕಿರುಕುಳ ನೀಡುವುದು ಸರ್ವೆ ಸಾಮಾನ್ಯ ಎನ್ನುವಂತಾಗಿದ್ದು, ಈ ಪದ್ಧತಿಯನ್ನು ಸರಿದಾರಿಗೆ ತರಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? (ಮಾಹಿತಿ ನೀಡುವುದು) | ಸರ್ಕಾರವು 2018-19ನೇ ಸಾಲಿನಿಂದ ಮದ್ಯದಂಗಡಿಗಳ ಸನ್ನದು ನವೀಕರಣ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕವೇ ನಡೆಸುತ್ತಿದ್ದು, ಸನ್ನದುದಾರರು ಸನ್ನದು ನವೀಕರಣಕ್ಕಾಗಿ ಕಛೇರಿಗೆ ಬರುವ ಅಗತ್ಯ ಇರುವುದಿಲ್ಲ. ಸನ್ನದು ನವೀಕರಣ ಪ್ರಕ್ರಿಯೆಯನ್ನು ಸಕಾಲ ಸೇವೆ ವ್ಯಾಪ್ತಿಗೆ ತಂದಿದ್ದು, ಸನ್ನದುದಾರರು Excise On-line Renewal System (EOLRS) ಮುಖಾಂತರ ಸನ್ನದು ನವೀಕರಣಕ್ಕಾಗಿ ಅರ್ಜಿಯೊಂದಿಗೆ ನಿಗದಿಪಡಿಸಿದ ದಾಖಲಾತಿಗಳನ್ನು ಸಲ್ಲಿಸಿದಲ್ಲಿ ನಿರ್ದಿಷ್ಟ ಅವಧಿಯೊಳಗೆ ಸನ್ನದು ನವೀಕರಣ ಮಾಡುವ ಕ್ರಮ ಜಾರಿಯಲ್ಲಿದ್ದು, ಅನುಮೋದನೆಗೊಂಡ ಸನ್ನದು ಪ್ರತಿಯನ್ನು ಸನ್ನದುದಾರರೇ ಆನ್‌ಲೈನ್ ಮುಖಾಂತರವೇ ಪಡೆಯಬಹುದಾಗಿರುತ್ತದೆ. |

**ಆಇ 78 ಇಎಲ್‌ಕ್ಯೂ 2022**

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು.

**ಕೆ. ಗೋಪಾಲಯ್ಯ**
**ಅಬಕಾರಿ ಸಚಿವರು ಹಾಗೂ ಹಾಸನ ಮತ್ತು ಮಂಡ್ಯ**
**ಜಿಲ್ಲಾ ಉಸ್ತುವಾರಿ ಸಚಿವರು**

| ಕ್ರ. ಸಂ | ಜಿಲ್ಲೆ | ಸ್ವೀಕೃತವಾದ ದೂರುಗಳ ಸಂಖ್ಯೆ | ಕ್ರಮ ಜರುಗಿಸಿ ವಿಲೇವಾರಿ ಮಾಡಲಾದ ದೂರುಗಳ ಸಂಖ್ಯೆ | ದೂರುಗಳ ಸಂಬಂಧ ದಾಖಲಿಸಿದ ಪ್ರಕರಣಗಳ ಸಂಖ್ಯೆ | | | | ದಸ್ತಗಿರಿಗೊಳಿಸಿದ ಆರೋಪಿಗಳ ಸಂಖ್ಯೆ | ಜಪ್ತುಪಡಿಸಿಕೊಂಡ ವಾಹನಗಳ ಸಂಖ್ಯೆ | ವಶಪಡಿಸಿಕೊಂಡ ವಸ್ತುಗಳ ವಿವರ | | | | | |
|---|---|---|---|---|---|---|---|---|---|---|---|---|---|---|---|
| | | | | ಘೋರ | 15ಎ | ಬಿಎಲ್‌ಸಿ | ಒಟ್ಟು | | | ಮದ್ಯ (ಲೀ) | ಬಿಯರ್ (ಲೀ) | ಕಳ್ಳಭಟ್ಟಿ (ಲೀ) | ಬೆಲ್ಲದ ಕೊಳೆ (ಲೀ) | ಸೇಂದಿ (ಲೀ) | ಸಿಹೆಚ್ ಪೌಡರ್ (ಕೆ.ಜಿ) |
| 1 | ಬೆಂಗಳೂರು ನಗರ ಜಿಲ್ಲೆ - 1 | 19 | 19 | 4 | 22 | 1 | 27 | 26 | 2 | 40 | 2 | 0 | 0 | 0 | 0 |
| 2 | ಬೆಂಗಳೂರು ನಗರ ಜಿಲ್ಲೆ - 2 | 36 | 36 | 0 | 10 | 6 | 16 | 10 | 0 | 2 | 1 | 0 | 0 | 0 | 0 |
| 3 | ಬೆಂಗಳೂರು ನಗರ ಜಿಲ್ಲೆ - 3 | 50 | 50 | 1 | 28 | 6 | 35 | 13 | 1 | 8.25 | 0.3 | 0 | 0 | 0 | 0 |
| 4 | ಬೆಂಗಳೂರು ನಗರ ಜಿಲ್ಲೆ - 4 | 51 | 51 | 1 | 6 | 18 | 25 | 4 | 0 | 12 | 0 | 0 | 0 | 0 | 0 |
| 5 | ಬೆಂಗಳೂರು ಗ್ರಾಮಾಂತರ | 282 | 282 | 8 | 109 | 11 | 128 | 110 | 0 | 164 | 50 | 0 | 0 | 0 | 0 |
| 6 | ಚಿಕ್ಕಬಳ್ಳಾಪುರ | 277 | 277 | 5 | 186 | 1 | 192 | 187 | 1 | 256 | 76 | 0 | 0 | 3 | 0 |
| 7 | ತುಮಕೂರು | 959 | 959 | 96 | 524 | 31 | 651 | 584 | 24 | 1401 | 114 | 0 | 25 | 20 | 0 |
| 8 | ಬೆಂಗಳೂರು ನಗರ ಜಿಲ್ಲೆ - 5 | 35 | 35 | 1 | 32 | 0 | 33 | 33 | 0 | 9.555 | 12 | 0 | 0 | 0 | 0 |
| 9 | ಬೆಂಗಳೂರು ನಗರ ಜಿಲ್ಲೆ - 6 | 32 | 32 | 0 | 25 | 8 | 33 | 9 | 0 | 1 | 0 | 0 | 0 | 0 | 0 |
| 10 | ಬೆಂಗಳೂರು ನಗರ ಜಿಲ್ಲೆ - 7 | 7 | 7 | 0 | 0 | 4 | 4 | 0 | 0 | 1 | 0 | 0 | 0 | 0 | 0 |
| 11 | ಬೆಂಗಳೂರು ನಗರ ಜಿಲ್ಲೆ - 8 | 62 | 62 | 0 | 26 | 10 | 36 | 26 | 0 | 11 | 0 | 0 | 0 | 0 | 0 |
| 12 | ಕೋಲಾರ | 539 | 537 | 16 | 313 | 19 | 348 | 320 | 29 | 465 | 314 | 0 | 0 | 0 | 0 |
| 13 | ರಾಮನಗರ | 241 | 241 | 3 | 174 | 6 | 183 | 175 | 1 | 47 | 12 | 0 | 0 | 30 | 0 |
| 14 | ಬಾಗಲಕೋಟೆ | 98 | 98 | 5 | 53 | 5 | 63 | 57 | 1 | 106 | 0 | 2 | 0 | 0 | 0 |
| 15 | ಬೆಳಗಾವಿ ಉತ್ತರ | 66 | 66 | 14 | 32 | 0 | 46 | 37 | 4 | 242 | 33 | 9 | 0 | 0 | 0 |
| 16 | ಬೆಳಗಾವಿ ದಕ್ಷಿಣ | 158 | 158 | 1 | 97 | 42 | 140 | 98 | 0 | 12 | 0 | 22 | 0 | 0 | 0 |
| 17 | ವಿಜಯಪುರ | 220 | 220 | 23 | 100 | 7 | 130 | 111 | 1 | 184 | 0 | 36 | 0 | 0 | 0 |
| 18 | ಧಾರವಾಡ | 132 | 132 | 1 | 34 | 10 | 45 | 35 | 1 | 27 | 0 | 0 | 0 | 0 | 0 |
| 19 | ಹಾವೇರಿ | 172 | 172 | 11 | 65 | 0 | 76 | 68 | 3 | 180 | 40 | 0 | 0 | 0 | 0 |
| 20 | ಬೀದರ್ | 73 | 71 | 7 | 27 | 5 | 39 | 32 | 0 | 92 | 12 | 0 | 0 | 0 | 0 |
| 21 | ಕಲಬುರಗಿ | 240 | 240 | 14 | 180 | 6 | 200 | 177 | 5 | 419 | 104 | 2 | 80 | 15 | 1 |
| 22 | ರಾಯಚೂರು | 214 | 208 | 37 | 131 | 35 | 203 | 21 | 13 | 621 | 470 | 185 | 503 | 550 | 1 |
| 23 | ಯಾದಗಿರಿ | 64 | 64 | 1 | 42 | 9 | 52 | 1 | 0 | 24 | 6 | 0 | 0 | 0 | 0 |
| 24 | ಬಳ್ಳಾರಿ | 228 | 228 | 11 | 80 | 17 | 108 | 82 | 0 | 124 | 0 | 0 | 0 | 0 | 0 |
| 25 | ಚಿತ್ರದುರ್ಗ | 182 | 182 | 11 | 96 | 4 | 111 | 103 | 3 | 401 | 38 | 0 | 0 | 0 | 0 |
| 26 | ದಾವಣಗೆರೆ | 90 | 90 | 14 | 34 | 4 | 52 | 33 | 1 | 277 | 52 | 0 | 0 | 0 | 0 |
| 27 | ಗದಗ | 159 | 159 | 9 | 156 | 3 | 168 | 160 | 2 | 291 | 12 | 3 | 0 | 0 | 0 |
| 28 | ಕೊಪ್ಪಳ | 75 | 74 | 5 | 40 | 15 | 60 | 45 | 0 | 97 | 61 | 0 | 0 | 0 | 0 |
| 29 | ದಕ್ಷಿಣ ಕನ್ನಡ | 250 | 250 | 2 | 33 | 16 | 51 | 34 | 1 | 172 | 34 | 10 | 0 | 0 | 0 |
| 30 | ಕೊಡಗು | 187 | 186 | 5 | 20 | 0 | 25 | 24 | 0 | 34 | 0 | 0 | 0 | 0 | 0 |
| 31 | ಶಿವಮೊಗ್ಗ | 557 | 557 | 57 | 304 | 13 | 374 | 319 | 5 | 748 | 97 | 50 | 600 | 0 | 0 |
| 32 | ಉಡುಪಿ | 46 | 46 | 2 | 11 | 2 | 15 | 12 | 1 | 23 | 1 | 0 | 0 | 0 | 0 |
| 33 | ಉತ್ತರ ಕನ್ನಡ | 201 | 200 | 12 | 110 | 0 | 122 | 101 | 3 | 199 | 42 | 5 | 0 | 0 | 0 |
| 34 | ಚಾಮರಾಜನಗರ | 191 | 191 | 10 | 69 | 29 | 108 | 76 | 0 | 230 | 30 | 0 | 0 | 0 | 0 |
| 35 | ಚಿಕ್ಕಮಗಳೂರು | 195 | 195 | 8 | 69 | 7 | 84 | 70 | 0 | 40 | 0 | 9 | 105 | 0 | 0 |
| 36 | ಹಾಸನ | 837 | 837 | 58 | 358 | 25 | 441 | 381 | 9 | 460 | 37 | 23 | 292 | 8 | 0 |
| 37 | ಮಂಡ್ಯ | 228 | 228 | 11 | 117 | 10 | 138 | 123 | 0 | 194 | 29 | 0 | 0 | 0 | 0 |
| 38 | ಮೈಸೂರು ನಗರ | 110 | 110 | 5 | 26 | 8 | 39 | 30 | 0 | 26 | 2 | 0 | 0 | 0 | 0.5 |
| 39 | ಮೈಸೂರು ಗ್ರಾಮಾಂತರ | 412 | 412 | 18 | 268 | 9 | 1 | 296 | 277 | 8 | 875 | 5 | 0 | 0 | 0 |
| | ಒಟ್ಟು | 7975 | 7962 | 487 | 4007 | 402 | 4602 | 4023 | 388 | 7649 | 2556.3 | 361 | 1605 | 626 | 2.5 |